


## ಮಿನುಗುವ ಜಡೆ ಬಿಲ್ಲೆ

ಉದ್ದ ಜಡೆ ಹಾಕಿ ಮೊಗ್ಗಿನ ಮಾಲೆ ಅಲಂಕಾರ ಮಾಡಿ ತುರುಬಿಗೊಂದು ಮಿನುಗುವ ಜಡೆ ಬಿಲ್ಲೆ ಇಟ್ಟರೆ ಒಂದು ಹಂತದ
ಕೇಶಾಲಂಕಾರ ಮುಗಿದಂತೆ. ಇದೀಗ ಮೆಟಲ್‌ನಲ್ಲೂ ಜಡೆಬಿಲ್ಲೆಗಳು ಬಂದಿವೆ. ಈ ಜಡೆ ಬಿಲ್ಲೆಗಳು ವಧುವಿನ
ಅಲಂಕಾರವನ್ನು ಪರಿಪೂರ್ಣಗೊಳಿಸುತ್ತದೆ. ಇದು ಹೊಸ ಟ್ರೆಂಡ್ ಅನ್ನೂ ಸೃಷ್ಟಿಸುತ್ತಿದೆ.
ತಲೆಗೂದಲು ಕಡಿಮೆ ಇರುವವರಿಗೂ ಜಡೆ ಬಿಲ್ಲೆಯೊಡಗೂಡಿದ ಮೊಗ್ಗಿನ ಜಡೆ ಸುಂದರವಾಗಿ
ಕಾಣುತ್ತದೆ. ಮಲ್ಲಿಗೆ ಮೊಗ್ಗು ಮಧ್ಯಕ್ಕೆ ಕಟ್ಟಿ, ಸುತ್ತಲೂ ಗುಲಾಬಿ ದಳಗಳನ್ನು ಪೋಣಿಸಿ ಮಾಡುವ
ಜಡೆ ಬಿಲ್ಲೆಯೂ ನೈಸರ್ಗಿಕವಾಗಿಯೂ ಆಕರ್ಷಕವಾಗಿಯೂ ಕಾಣುತ್ತದೆ.
ಹೊನ್ನಿನ ಹೊಳಪಿನ ಜಡೆ ಬಿಲ್ಲೆ ಮಲ್ಲಿಗೆ ಮೊಗ್ಗಿನ ಜಡೆ ಹಾಕಿದಾಗ ಎದ್ದು ಕಾಣುತ್ತದೆ. ಇದೀಗ
ಪ್ಲಾಸ್ಟಿಕ್ ಜಡೆ ಬಿಲ್ಲೆಗಳೂ ಬಂದಿವೆ. ವಿವಿಧ ವಿನ್ಯಾಸ, ಆಕಾರಗಳಲ್ಲಿ ಇದು ಲಭ್ಯ. ಮ್ಯಾಚಿಂಗ್
ಮತ್ತು ಕಾಂಟ್ರಾಸ್ಟ್ ಜಡೆ ಬಿಲ್ಲೆಗಳು ಯಾವ ಸೀರೆ ಉಡುತ್ತೇವೆಯೋ ಅದಕ್ಕೆ ಅನುಗುಣವಾಗಿ
ಧರಿಸಬಹುದು. ದಪ್ಪನೆಯ ಜಡೆ ಬಿಲ್ಲೆ ಹಾಕಿಕೊಂಡರೆ ಅದಕ್ಕೆ ಸೂಕ್ತವೆನಿಸುವ ದೊಡ್ಡದಾದ
ಕಿವಿಯೋಲೆ ಸಖತ್ ಲುಕ್ ಕೊಡುತ್ತದೆ.
ಚೂಡಿದಾರ್ ಧರಿಸಿದಾಗ, ಹಾಫ್ ಸಾರಿ ಹಾಕಿದಾಗ, ರೇಷ್ಮೆ ಸೀರೆ ತೊಟ್ಟಾಗ, ಫ್ಯಾನ್ಸಿ
ಸೀರೆ ಉಟ್ಟಾಗ ತುರುಬಿನ ಸುತ್ತ ಜಡೆ ಬಿಲ್ಲೆಗಳನ್ನು ಹೂವು ಪೋಣಿಸಿದಂತೆ ಧರಿಸಿಕೊಂಡರೆ
ಗ್ರ್ಯಾಂಡ್ ಲುಕ್ ಅನ್ನು ಪಡೆಯಬಹುದು.

■ ಎಸ್.ಜಿ.ಪಿ.

ಅಲಂಕಾರಿಕ ವಸ್ತುಗಳು ಬೇಕೇ ಬೇಕು. ಇವೆಲ್ಲದರ ಹೊರತಾಗಿ ಅವಳ ಉದ್ದ ಜಡೆಯ ಸುತ್ತ ಮಲ್ಲಿಗೆಯನ್ನು ತೊಡಿಸುವುದೇ ಒಂದು ಟ್ರೆಂಡ್. ಏನೇ ತೊಟ್ಟರೂ ಶುಭ ಸಮಾರಂಭಗಳಲ್ಲಿ ಮದುಮಗಳಿಗೆ ಮೊಗ್ಗಿನ ಜಡೆ ಇಲ್ಲದಿದ್ದರೆ ಅವಳ ಅಂದ ಅಪೂರ್ಣ ಎಂದೇ ಮಹಿಳೆಯರ ಭಾವನೆ.

### ಮೊಗ್ಗಿನ ಜಡೆ ವೈವಿಧ್ಯ

ಮೊಗ್ಗಿನ ಜಡೆಗಳಲ್ಲಿ ಮಂಗಳೂರು ಮೊಗ್ಗಿನ ಜಡೆ, ಮೈಸೂರು ಮೊಗ್ಗಿನ ಜಡೆ ಶೈಲಿಗಳು ಜನಪ್ರಿಯ, ಆದರೆ ನಮ್ಮ ದುಬಾರಿ ಬದುಕಿನಲ್ಲಿ ಹೂವುಗಳ ಬೆಲೆ ಹೆಚ್ಚಾಗಿದ್ದರೂ ಮಹಿಳೆಯರಿಗೆ ಸಭೆ, ಸಮಾರಂಭಗಳಲ್ಲಿ ಮೊಗ್ಗಿನ ಜಡೆಯ ಆಕರ್ಷಣೆಯೇನೂ ಕಡಿಮೆಯಾಗಿಲ್ಲ. ಇದರ ಜೊತೆಗೆ ಮಾರುಕಟ್ಟೆಯಲ್ಲಿ ದೊರೆಯುವ ಮಲ್ಲಿಗೆ ಮೊಗ್ಗಿನ ಜಡೆ, ಗುಲಾಬಿ ಮೊಗ್ಗಿನ ಜಡೆ, ಮುತ್ತಿನ ಜಡೆ, ಹರಳಿನ ಜಡೆ, ಜರಿಯಿಂದ ತಯಾರಿಸಿದ ಜಡೆಗಳಿಗೆ ಬೇಡಿಕೆ ಹೆಚ್ಚಾಗುತ್ತಲೇ ಇದೆ.

ಗುಲಾಬಿ ಹೂವಿನ ಜಡೆಯ ಸೊಬಗು ಅತ್ಯಂತ ವೈಶಿಷ್ಟ್ಯಪೂರ್ಣ. ಗುಲಾಬಿಯನ್ನು ಹೂಗಳ ರಾಣಿಯೆಂದು ಕರೆಯಲಾಗುತ್ತದೆ. ಬೇರೆ ಬೇರೆ ಬಣ್ಣಗಳಲ್ಲಿ ಸಿಗುವ ಗುಲಾಬಿ ಹೂವುಗಳಿಂದ ಜಡೆ ಹೆಣೆದುಕೊಳ್ಳುವವರೂ ಇದ್ದಾರೆ. ಆದರೆ ಮದುವೆಯ ಸಮಾರಂಭಕ್ಕೆ ಕೆಂಪು ಗುಲಾಬಿಗೆ ಆದ್ಯತೆ ಹೆಚ್ಚು. ಹೂಗಳಲ್ಲಿ ಮೊದಲ ಸ್ಥಾನದಲ್ಲಿರುವುದು ಮಲ್ಲಿಗೆ ಮೊಗ್ಗಿನ ಜಡೆ. ಮಲ್ಲಿಗೆ ಘಮಘಮ ಸುವಾಸನೆಯ ಜಡೆ ಮದುಮಗಳಿಗೆ ಮುಡಿಸಿದಾಗ ಅದು ಅವಳಿಗೆ ಹೊಳಪನ್ನು ನೀಡುವುದರ ಜೊತೆಗೆ ವಿಶಿಷ್ಟ ಲುಕ್ ನೀಡುವುದಂತೂ ಗ್ಯಾರಂಟಿ. ಅಲ್ಲದೆ ಈ ಮಲ್ಲಿಗೆ ಹೂ ಬರೀ ಸುವಾಸನೆಯಿಂದಲೇ ಎಲ್ಲರ ಮನ ಗೆಲ್ಲುತ್ತದೆ ಮತ್ತು ಹೆಣ್ಣು ಮಕ್ಕಳ ಶೃಂಗಾರದಲ್ಲಿ ಪ್ರಧಾನ ಆದ್ಯತೆಯನ್ನು ಪಡೆದುಕೊಂಡಿದೆ.

ಕರ್ನಾಟಕ ಹಾಗೂ ದಕ್ಷಿಣ ಭಾರತದ ಹಲವೆಡೆ ಮಲ್ಲಿಗೆಯು ಅಗ್ರಸ್ಥಾನವನ್ನು ಪಡೆದುಕೊಂಡಿದೆ. ಯಾವುದೇ ಸಭೆ, ಸಮಾರಂಭಗಳಲ್ಲಿ ಮಲ್ಲಿಗೆಯ ಮೆರುಗೇ ಮೆರುಗು. ನೃತ್ಯಗಾರ್ತಿಯರಿಗೂ ಪ್ರಿಯವಾಗಿರುವ ಮಲ್ಲಿಗೆಯಿಂದ ಅಂದ ಹೆಚ್ಚುವುದಲ್ಲದೆ ಕೇಶಕ್ಕೆ ಉತ್ತಮ ಲುಕ್ ನೀಡುತ್ತದೆ. ಜೊತೆಗೆ ಹೆಣ್ಣಿನ ಒಟ್ಟಾರೆ ಅಂದವನ್ನು ಇಮ್ಮಡಿಗೊಳಿಸುವುದರಲ್ಲಿ ಎರಡು ಮಾತಿಲ್ಲ. ■